

# ಕ್ಯಾಟರಾಕ್ಟ್ ಕಣ್ಣಿಗೆ ಸರ್ಜರಿ

## ಮಕ್ಕಳಲ್ಲಿ ಆನುವಂಶೀಯತೆಯೇ ಪ್ರಮುಖ ಕಾರಣ

**ಮಕ್ಕಳಲ್ಲಿ ಆನುವಂಶೀಯವಾಗಿ ಕಣ್ಣುಗಳಿಗೆ ಕ್ಯಾಟರಾಕ್ಟ್ ಬರುವ ಸಾಧ್ಯತೆ ಇದೆ. ಚಿಕ್ಕ ವಯಸ್ಸಿನಲ್ಲೇ ಕಣ್ಣು ಮಂಜಾಗುವುದು, ದೃಷ್ಟಿ ಮಸುಕಾಗುವುದು, ಕಾಣಿಸದೇ ಇರುವುದು... ಮುಂತಾದವು 'ಪೀಡಿಯಾಟ್ರಿಕ್ ಕ್ಯಾಟರಾಕ್ಟ್'ನ ಲಕ್ಷಣ. ಕಣ್ಣುಗಳ ಪೊರೆ ತೆಗೆಯುವ ಶಸ್ತ್ರಚಿಕಿತ್ಸೆಯಿಂದ ಸಂಪೂರ್ಣ ಗುಣಮುಖರಾಗಬಹುದು.**

■ **ಉಮಾ ಅನಂತ್**

ಬೆಂಗಳೂರಿನ ಪವನ್‌ಕುಮಾರ್‌ಗೆ ಒಂಬತ್ತು ವರ್ಷ. ಹುಟ್ಟಿನಿಂದಲೂ ಈತನ ಎರಡೂ ಕಣ್ಣುಗಳಲ್ಲಿ ಕ್ಯಾಟರಾಕ್ಟ್ ದೋಷವಿತ್ತು. ಆದರೆ ಹೆತ್ತವರಿಗೆ ಇದರ ಅರಿವೇ ಇರಲಿಲ್ಲ. ದೃಷ್ಟಿ ಮಸುಕಾಗಿ ಕಾಣಿಸುತ್ತಿತ್ತು. ಶಾಲೆಯಲ್ಲಿ ಬೋರ್ಡ್‌ನಲ್ಲಿ ಬರೆದ ಅಕ್ಷರ ಕಾಣಿಸದೇ ಇರುವುದು, ಮನೆಯಲ್ಲೂ ಕಣ್ಣುಗಳು ಮಂಜು ಮಂಜಾದಂತಾಗುವುದು... ಮುಂತಾಗಿ ತೊಂದರೆಯಾಗುತ್ತಿತ್ತು. ನೇತ್ರವೈದ್ಯರಲ್ಲಿ ತಪಾಸಣೆ ಮಾಡಿದಾಗ ಆತನಿಗೆ ಹುಟ್ಟಿನಿಂದಲೇ ಕ್ಯಾಟರಾಕ್ಟ್ ಇರುವುದು ಪತ್ತೆಯಾಯಿತು.

ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯಲ್ಲಿರುವ ಡಾ.ಅಗರ್‌ವಾಲ್ಸ್ ನೇತ್ರ ಆಸ್ಪತ್ರೆಯಲ್ಲಿ ಹೆಚ್ಚಿನ ತಪಾಸಣೆ ನಡೆಸಿದಾಗ ಇದು ಆನುವಂಶೀಯವಾಗಿ ಬಂದಿರುವ ಕ್ಯಾಟರಾಕ್ಟ್ (ಕಣ್ಣಿನ ಪೊರೆ) ಸಮಸ್ಯೆ. ಇದಕ್ಕೆ ಶಸ್ತ್ರಚಿಕಿತ್ಸೆ ಒಂದೇ ದಾರಿ ಎಂಬ ನಿರ್ಧಾರಕ್ಕೆ ವೈದ್ಯರು ಬಂದರು. ಇದರಂತೆ ಪವನ್‌ಗೆ ಕಣ್ಣಿನ ಶಸ್ತ್ರಚಿಕಿತ್ಸೆ ಮಾಡಲಾಯಿತು. ಈಗ ಬಾಲಕ ಚೇತರಿಸಿಕೊಂಡಿದ್ದಲ್ಲದೆ, ದೃಷ್ಟಿ ಸಂಪೂರ್ಣವಾಗಿ ಮರಳಿಬಂದಿದೆ.

'ಈತನಿಗೆ ಹುಟ್ಟಿನಿಂದಲೇ ಕ್ಯಾಟರಾಕ್ಟ್ ಇತ್ತು. ಇದನ್ನು ವೈದ್ಯಕೀಯ ಪರಿಭಾಷೆಯಲ್ಲಿ 'ಕಂಜೆನಿಟಲ್



ನೇತ್ರ ಶಸ್ತ್ರಚಿಕಿತ್ಸಕ ಡಾ. ರವಿ ದೊರೈರಾಜ್

ಕ್ಯಾಟರಾಕ್ಟ್' ಎಂದು ಕರೆಯಲಾಗುತ್ತದೆ. ಈತನ ತಾಯಿಗೂ ಕ್ಯಾಟರಾಕ್ಟ್ ಸಮಸ್ಯೆ ಇತ್ತು. ಈ ಬಾಲಕನ ಎರಡು ಕಣ್ಣುಗಳಲ್ಲೂ ಪೊರೆ ಬಂದಿದ್ದು ದೃಷ್ಟಿ ಕಡಿಮೆ ಇತ್ತು. ಈತನನ್ನು ತಪಾಸಣೆ ಮಾಡಿದೆ. ಶಸ್ತ್ರಚಿಕಿತ್ಸೆಯೊಂದೇ ದಾರಿ ಎಂದು ನಿರ್ಧರಿಸಿ ಎರಡು ತಿಂಗಳ ಹಿಂದೆ ಸರ್ಜರಿ ಮಾಡಿದೆ. ಮೊದಲು ಒಂದು ಕಣ್ಣಿಗೆ, ಮತ್ತೊಂದು ವಾರ ಬಿಟ್ಟು ಇನ್ನೊಂದು ಕಣ್ಣಿಗೆ ಶಸ್ತ್ರಚಿಕಿತ್ಸೆ ಮಾಡಿದೆ. ಅಚ್ಚರಿ ಎಂದರೆ ಈ ಬಾಲಕ ಬಹಳ ಚೂಟಿಯಿದ್ದ. ಬೇರೆಲ್ಲ ರೀತಿಯಿಂದ ಆರೋಗ್ಯವಾಗಿಯೂ ಇದ್ದ. ಹೀಗಾಗಿ ಇವನಿಗೆ ಕಣ್ಣಿನ ಸರ್ಜರಿಯನ್ನು ಅನಸ್ತೇಷಿಯಾ ನೀಡದೆ ಮಾಡಿದೆವು. ಕೇವಲ ಡ್ರಾಪ್ಸ್ ಹಾಕಿ ನೋವಾಗದ ರೀತಿಯಲ್ಲಿ ಸರ್ಜರಿ ಮಾಡಿದೆವು. ಇದು ವೈದ್ಯಲೋಕದಲ್ಲಿ ಅತ್ಯಂತ ಅಪರೂಪದ ಪ್ರಕರಣ' ಎಂದು ವಿವರ ನೀಡುತ್ತಾರೆ ಅಗರ್‌ವಾಲ್ಸ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕರೂ ಆಗಿರುವ ಸರ್ಜನ್ ಡಾ. ರವಿ ದೊರೈರಾಜ್.

'ಸಾಮಾನ್ಯವಾಗಿ ತಾಯಿ ತಂದೆಯರಲ್ಲಿ ಕ್ಯಾಟರಾಕ್ಟ್ ಇದ್ದರೆ ಮಕ್ಕಳಿಗೂ ಬರುತ್ತದೆ. ಇಬ್ಬರು ಮಕ್ಕಳಿದ್ದರೆ ಇಬ್ಬರಿಗೂ ಬರಬಹುದು, ಒಬ್ಬರಿಗೆ ಮಾತ್ರವೂ ಬರಬಹುದು. ಕೆಲ ಸಂದರ್ಭದಲ್ಲಿ ಇಬ್ಬರು ಮಕ್ಕಳಿಗೆ ಬರದೆ ಮೊಮ್ಮಕ್ಕಳಿಗೆ ಬರುವ ಸಾಧ್ಯತೆಯೂ ಇದೆ' ಎನ್ನುವ ಡಾ. ರವಿ, ಹುಡುಗನ ತಾಯಿ ಗರ್ಭಿಣಿಯಾಗಿದ್ದಾಗ ತೆಗೆದುಕೊಂಡಿರುವ ಮಾತ್ರೆಯ ದುಷ್ಪರಿಣಾಮದಿಂದ ಹಾಗೂ ಪ್ರೆಗ್ನೆನ್ಸಿ ಸಮಯದಲ್ಲಿ ಯಾವುದಾದರೂ ಸೋಂಕು